**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 887/2021** ಸಿ.ಡಬ್ಲ್ಯೂ -4

ಪಿ.ಡಬ್ಲ್ಯೂ -1

ಹೆಸರು : ಶಿವಾನಂದ

ತಂದೆ:ಗಂಡ : ನೀಲಕಂಠರಾವ ಪಾಟೀಲ

ವಯಸ್ಸು : 36 ವರ್ಷ

ಉದ್ಯೋಗ : ಅಬಕಾರಿ ನೀರಿಕ್ಷಕರು ಕಲಬುರಗಿ

ವಾಸಸ್ಥಳ : ಕಲಬುರಗಿ

ದಿನಾಂಕ:10.01.2024

ಸತ್ಯ ಪ್ರತಿಜ್ಞೆಯ ಮೇರೆಗೆ.

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ನಾನು ದಿ.06.01.2017 ರಿಂದ 24.11.2020 ರ ವರೆಗೆ ಆಳಂದ ಅಬಕಾರಿ ಇಲಾಖೆಯಲ್ಲಿ ಉಪನಿರೀಕ್ಷಕನಾಗಿ ಕಾರ್ಯ ನಿರ್ವಹಿಸಿದ್ದೇನೆ.

ದಿ.10.11.2019 ರಂದು ಚಾಸಾ-3 ರವರಿಂದ ಕಡತವನ್ನು ಪಡೆದು ದಿ.12.11.2019 ರಂದು ರಾಸಾಯನಿಕ ಪರಿಕ್ಷೆಗಾಗಿ ಚಾಸಾ-5 ರವರ ಮುಖಾಂತರ 90 ಎಂಎಲನ 30 ಟೆಟ್ರಾ ಪ್ಯಾಕಗಳು ಕಳುಹಿಸಿಲಾಯಿತು. ದಿ.13.11.2019 ರಂದು ವರದಿಯನ್ನು ಪಡೆದಿರುತ್ತೇನೆ. ಕಲಬುರಗಿ ಆರ್.ಟಿ.ಓ.ರವರಿಗೆ ದಿ.17.12.2019 ರಂದು ವಾಹನದ ಮಾಲೀಕತ್ವದ ಕುರಿತು ಪತ್ರವನ್ನು ಬರೆದಿರುತ್ತೇನೆ. ಅದೇ ದಿನ ಆರಟಿಓ ಕಲಬುರಗಿಯವರು ವರದಿಯನ್ನು ನೀಡಿರುತ್ತಾರೆ. ವರದಿಯಲ್ಲಿ 2 ನೇ ಅರೋಪಿ ವಾಹನದ ಮಾಲೀಕ ಎಂದು ವರದಿಯನ್ನು ನೀಡಿರುತ್ತಾರೆ. ಚಾಸಾ-7, 8 ರವರ ಹೇಳಿಕೆ ಪಡೆದಿರುತ್ತೇನೆ. ಆರಟಿಓ ರವರ ಬಿ ಎಕ್ಸ್ಟ್ರಾಕ್ಟ ಪ್ರಕಾರ 2 ನೇ ಆರೋಪಿರವರನು ಸೇರಿಸಿ ದೋ.ಪ. ದಿ.20.12.2019 ರಂದು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಈಗ ದಿ.12.11.2019 ರ ಪತ್ರ ತೋರಿಸಿ ಅದನ್ನು ಗುರುತಿಸಿ ಪತ್ರವನ್ನುನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಸಾಕ್ಷಿಗೆ ಈಗ ರಾಸಾಯನಿಕ ಪರಿಕ್ಷಾ ವರದಿ ತೋರಿಸಿ ಅದನ್ನು ಗುರುತಿಸಿದ್ದು ಅದನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ಸಾಕ್ಷಿಗೆ ಈಗ 17.12.2019 ರ ಪತ್ರವನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಪತ್ರವನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. 29 ಒರಿಜನಲ ಚಾಯಸ ವಿಸ್ಕಿ ಪೌಚಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು.

**ಪಾ. ಸವಾಲು:- ಆರೋಪಿ ಪರ ಬಿ.ಜಿ.ಬಿ. ವಕೀಲರಿಂದ:**

ನಾನು 1 ನೇ ಆರೋಪಿಗೆ ವಾಹನದ ಮಾಲೀಕರ ಕುರಿತು ವಿಚಾರಣೆ ಮಾಡಿರುವುದಿಲ್ಲ ಆದರೆ ಬಿ ಎಕ್ಸ್ಟ್ರಾಕ್ಟ ಪಡೆದಿರುತ್ತೇನೆ. 2 ನೇ ಅರೋಪಿಗೆ ಘಟನೆ ಸಮಯದಲ್ಲಿ ವಾಹನ ಯಾರ ಬಳಿ ಇತು ಎಂದು ವಿಚಾರಣೆ ಮಾಡಿರುವುದಿಲ್ಲ. 1 ನೇ ಆರೋಪಿ ಹಿರೋಳ್ಳಿಯವರು 2 ನೇ ಆರೋಪಿ ಯಳಸಂಗಿಯವರು. ಹಿರೋಳ್ಳಿಯಿಂದ ಯಳಸಂಗಿ ಸುಮಾರು 15 ಕಿ.ಮಿ. ಅಂತರದಲಿ ಇರುತ್ತದೆ. ಆರೋಪಿತರು ಎನು ಕೆಲಸ ಮಾಡುತ್ತಾರೆ ಎಂದು ವಿಚಾರಣೆ ಮಾಡಿರುವುದಿಲ್ಲ. ಆರೋಪಿತರು ಒಟ್ಟು 5 ಪೆಟ್ಟಿಗೆಯಲ್ಲಿ 480 ಪ್ಯಾಕೇಟಗಳನ್ನು ಸಾಗಾಣಿಕೆ ಮಾಡುತ್ತಿದ್ದರು. ಸಾಮಾನ್ಯವಾಗಿ 5 ಬಾಕ್ಸಗಳನ್ನು ದ್ವಿಚಕ್ರವಾಹನದ ಮೇಲೆ ಸಾಗಾಣಿಕೆ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು

ಪ್ರಕರಣ ದಾಖಲಾದ ಕಾರಣ ಸುಳ್ಳು ದೋ.ಪ. ಸಲ್ಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಮು.ಮಾ.ಗಳನ್ನು ರಾಸಾಯನಿಕ ಪರಿಕ್ಷೆಗ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಯಾವುದಾದರೂ ಒಂದು ಗಾಡಿಯ ಸಂಖ್ಯೆ ತೋರಿಸಬೇಕು ಎಂದು 2 ನೇ ಅರೋಪಿಯ ವಾಹನ ಸಂಖ್ಯೆಯನ್ನು ಅರಟಿಓ ಕಚೇರಿಗೆ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮು.ಮಾ.ಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಸಾಮಾನ್ಯವಾಗಿ ಬೇರೆ ಕಡೆ ಸಿಗುತ್ತವೆ ಎಂದರೆ ಸರಿ.

ದಿ.10.11.2019 ರಂದು ಚಾಸಾ-3 ರವರಿಂದ ಕಡತವನ್ನು ಪಡೆದು ದಿ.12.11.2019 ರಂದು ರಾಸಾಯನಿಕ ಪರಿಕ್ಷೆಗಾಗಿ ಚಾಸಾ-5 ರವರ ಮುಖಾಂತರ 90 ಎಂಎಲನ 30 ಟೆಟ್ರಾ ಪ್ಯಾಕಗಳು ಕಳುಹಿಸಿಲಾಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ದಿ.13.11.2019 ರಂದು ವರದಿಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಕಲಬುರಗಿ ಆರ್.ಟಿ.ಓ.ರವರಿಗೆ ದಿ.17.12.2019 ರಂದು ವಾಹನದ ಮಾಲೀಕತ್ವದ ಕುರಿತು ಪತ್ರವನ್ನು ಬರೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಅದೇ ದಿನ ಆರಟಿಓ ಕಲಬುರಗಿಯವರು ವರದಿಯನ್ನು ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ವರದಿಯಲ್ಲಿ 2 ನೇ ಅರೋಪಿ ವಾಹನದ ಮಾಲೀಕ ಎಂದು ವರದಿಯನ್ನು ನೀಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಚಾಸಾ-7, 8 ರವರ ಹೇಳಿಕೆ ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ. ಆರಟಿಓ ರವರ ಬಿ ಎಕ್ಸ್ಟ್ರಾಕ್ಟ ಪ್ರಕಾರ 2 ನೇ ಆರೋಪಿರವರನು ಸೇರಿಸಿ ದೋ.ಪ. ದಿ.20.12.2019 ರಂದು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ.ಸಿ ಆಳಂದ